ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೇ, ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನು ನೋಡಬೇಕು. ಯಾವ ಹೆಡ್‌ನಲ್ಲಿ ಸಾವು ಪರಿಹಾರವನ್ನು ಕೊಡಬೇಕೆನ್ನುವುದನ್ನು ನೋಡಬೇಕು. ಅದನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಛೇರ್ಮನ್: ಅದರ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಏಕ್‌ದಂ ಅವರು ಕೂಡ ಹಣವನ್ನು ಬಿಡುಗಡೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಪ್ರತಿಸಾರಿ ಸದನ ಸೇರಿದಾಗಲೂ ಕೂಡ ಸದಸ್ಯರಿಗೆ ಗಂಭೀರವಾದ ಉತ್ತರವನ್ನು ಕೊಡುವುದಕ್ಕೆ ಆಗದಿದ್ದಾಗ ಪರಿಶೀಲನೆ ಮಾಡುತ್ತೇನೆಂದು ಹೇಳುತ್ತಾರೆ. ಅದು ಪರಿಶೀಲನೆಯಲ್ಲೇ ಇರುತ್ತೆ. ನಮ್ಮ ಅವಧಿ ಮುಗಿದರೂ ಕೂಡ ಅದು ಪರಿಶೀಲನೆಯಲ್ಲೇ ಇರುತ್ತೆ.

ವಿಷಯ: (vi) ದಕ್ಷಿಣಕನ್ನಡ ಜಿಲ್ಲೆಯ ಪರಂಗಿಪೇಟೆ ಮಾರಿಪಳ್ಳಿ, ಅಮ್ಮೆಮೂರುಗಳ ಹೆದ್ದಾರಿಗಳಲ್ಲಿ ಕೊಲೆಯಾಗುತ್ತಿರುವುದು.

+ ಶ್ರೀ ಎನ್. ಯೋಗೀಶ್ ಭಟ್(ಮಂಗಳೂರು): ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಪರಂಗಿಪೇಟೆ ಕ್ಷೇತ್ರ ಅದೇ ರೀತಿ ಮಾರಿಪಳ್ಳಿ ಅಮ್ಮೆಮಾರು ಕ್ಷೇತ್ರ ಅಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿದೆ. ಕಳೆದ ಹಲವು ವರ್ಷಗಳಿಂದ ವರ್ಷದಲ್ಲೇ ಮೂರು ನಾಲ್ಕು ಗಲಾಟೆಗಳಾದರೂ ಅಲ್ಲಿ ಇದ್ದೇ ಇದೆ. ಯಾವ ಸಂದರ್ಭದಲ್ಲಿ ಯಾರ ಮನೆಗೆ ಹಲ್ಲೆಯಾಗುತ್ತೋ ಎಂದು ಹೇಳುವುದಕ್ಕಾಗುವುದಿಲ್ಲ. ಯಾವ ವ್ಯಕ್ತಿಗಳನ್ನು ಕಡಿಯುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವಂಥ ಕಾರುಗಳನ್ನು ನಿಲ್ಲಿಸಿ ಎಲ್ಲಿ ಖೂನಿ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಅಂಥ ಒಂದು ಪ್ರಕ್ಷುಬ್ಧ ವಾತಾವರಣ ದಕ್ಷಿಣ ಕನ್ನಡ ಜಿಲ್ಲೆಯ ಪರಂಗಿಪೇಟೆ ಕ್ಷೇತ್ರದಲ್ಲಿ ನಡೆದಿದೆ. ಮೊನ್ನೆ ತಾನೇ ಕೆಲವು ದಿವಸಗಳ ಹಿಂದೆ ಇದೇ ಮಾರ್ಚ್ ತಿಂಗಳು 10 ರಂದು ಒಂದು ಹಲ್ಲೆಯಾಯಿತು. 12ನೇ ತಾರೀಖು ಅದೇ ಗುಂಪಿನಿಂದ ಇನ್ನೊಂದು ಹಲ್ಲೆ ನಡೆಯಿತು. ಒಂದೆಂದರೆ ಆನಂದ ಪಂಪದ ಎಂದು ಹೇಳುವ ವ್ಯಕ್ತಿ ಭೂತಕುಲದ ಪಾದ್ರಿ ಹಾಗೂ ಹೋಟೆಲ್ ಕೆಲಸ ಮಾಡುವ ಒಬ್ಬ ಸಾಮಾನ್ಯ ವ್ಯಕ್ತಿ. ಅವರು ರಾತ್ರಿ ಬರುವ ಸಂದರ್ಭದಲ್ಲಿ ಅವರ ಮೇಲೆ ಹಲ್ಲೆ ನಡೆಸಿ ಅವರ ಹೊಟ್ಟೆಗೆ ತಿವಿದು ಕರುಳನ್ನು ಹೊರಗೆ ಹಾಕಿದ್ದಾರೆ. ಅವರನ್ನು ಈಗಾಗಲೇ ಪಾದರಮಲ್ ಆಸ್ಪತ್ರೆಗೆ ಸೇರಿಸಿ ಟ್ರೀಟ್‌ಮೆಂಟ್ ಕೊಡಿಸಿದ್ದಾರೆ. ಸುಮಾರು ಹತ್ತು ಸಾವಿರ ರೂಪಾಯಿಗಳಿಗೂ ಹೆಚ್ಚು ಮೆಡಿಕಲ್ ಬಿಲ್ ಈಗಾಗಲೇ ಆಗಿದೆ. ಎರಡನೇ ವ್ಯಕ್ತಿ ಮೊಂಡಪ್ಪಪೂಜಾರಿ ಎನ್ನುವವರು. ಅವರ ಕುತ್ತಿಗೆಯನ್ನು ಕಡಿಯುವ ಪ್ರಯತ್ನವಾಗಿತ್ತು. ಅದೃಷ್ಟವಶಾತ್ ಅವರು ಆ ಒಂದು ದುರಂತದಿಂದ ಪಾರಾಗಿದ್ದಾರೆ. ಅವರು ಕೂಡ ಒಬ್ಬ ಸಾಮಾನ್ಯ ವ್ಯಕ್ತಿ. ಅವರು ಕೂಡ ತಮ್ಮಕೆಲಸ ಮುಗಿಸಿಕೊಂಡು ಮನೆಗೆ ಬರುವ ಸಂದರ್ಭದಲ್ಲಿ ಈ ಹಲ್ಲೆಯನ್ನು ಮಾಡಿದ್ದಾರೆ. ಈಗಾಗಲೇ ಆಗಿರುವ ಟ್ರೀಟ್‌ಮೆಂಟ್‌ನಿಂದ 16 ಸಾವಿರ ರೂಪಾಯಿಗಳಿಗೂ ಹೆಚ್ಚು ಖರ್ಚಾಗಿದೆ. ಮೂರನೇ ವ್ಯಕ್ತಿ ದಾಮೋದರ ಪಟ್ಟಾರಿ. ದೇವರ ಪಲ್ಲಕ್ಕಿಯನ್ನು ಹೊರುವ ಕೂಲಿ ಕೆಲಸ ಮಾಡುವಂಥ ವ್ಯಕ್ತಿ. ಇವರ ಕೈಯನ್ನು ಕಡಿದು, ಹೊಟ್ಟೆಯನ್ನು ಸಿಗಿದು ದೇಹದ ಎಲ್ಲಾ ಭಾಗಗಳನ್ನು ತಿವಿದು

ಗಾಯಗೊಳಿಸಲಾಗಿತ್ತು. ಈಗಾಗಲೇ 50 ಸಾವಿರ ರೂಪಾಯಿಗಳಿಗೂ ಚೆಕ್ಕು ಮೆಡಿಕಲ್ ಬಿಲ್ ಆಗಿದೆ. ಸಾದರಮಲ್ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟನ್ನು ತೆಗೆದುಕೊಳ್ಳುತ್ತಿದ್ದಾರೆ. ನಾಳ್ಕೇ ವ್ಯಕ್ತಿ ಜಾತ್ರೆಯಲ್ಲಿ ಮಿಠಾಯಿಯನ್ನು ಮಾರಾಟ ಮಾಡುವ ವಿಶ್ವನಾಥ ಪೈ ಎನ್ನುವವರು. ಅವರು ಮಿಠಾಯಿಯನ್ನು ಮಾರಾಟ ಮಾಡಿ ಮನೆಗೆ ಬರುವ ಸಂದರ್ಭದಲ್ಲಿ ಅದೇ ರೀತಿ ಹಲ್ಲೆ ನಡೆಯಿತು. ಕುತ್ತಿಗೆ ಮತ್ತು ತಲೆಯ ಮೇಲೆ ಹಲವು ಹಲ್ಲೆಗಳನ್ನು ನಡೆಸಿ ಅವರು ಬೈವಮಶಾತ್ ಒಂದು ದುರಂತದಿಂದ ಪಾರಾಗಿದ್ದಾರೆ. ಸುಮಾರು 43 ಸಾವಿರ ರೂಪಾಯಿಗಳು ಮೆಡಿಕಲ್ ಬಿಲ್ ಈಗಾಗಲೇ ಆಗಿದೆ. ನನಗೆ ಇರುವ ಸಮಸ್ಯೆ ಎಂದರೆ ಕ್ಷೇತ್ರಕ್ಕೆ ಸಂಬಂಧಪಟ್ಟಹಾಗೆ ಅಲ್ಲಿ ಪೊಲೀಸರು ಏಕೆ ನಿಷ್ಕ್ರಿಯರಾಗಿದ್ದಾರೆ? ಇದರ ಹಿಂದೆ ಏಕೆ ಕ್ರಮ ತೆಗೆದುಕೊಳ್ಳುವುದಿಲ್ಲವೆಂದಾಗಿಲ್ಲ. ಮುಂದಕ್ಕೂ ಕೂಡ ಯಾವ ರೀತಿ ಕ್ರಮ ತೆಗೆದುಕೊಳ್ಳಬಹುದು ಎಂದು ಹೇಳುವುದರ ಬಗ್ಗೆಯೂ ಕೂಡ ಜನರಲ್ಲಿ ಒಂದು ಅನುಮಾನ ಉಂಟಾಗಿದೆ. ವಿಶೇಷವಾಗಿ ರಾಜಕೀಯ ಒತ್ತಡ ಬರುತ್ತಿದೆ, ಸಚಿವರುಗಳ ಒತ್ತಡ ಬರುತ್ತಿರುವುದರಿಂದ ಅಪರಾಧಿಗಳನ್ನು ಮೂರು ಜನ ಡ್ರಗ್ ಅಡಿಕ್ಟ್ ಎಂದು ಹೇಳುವ ಅಪರಾಧಿಗಳನ್ನು ಹಿಡಿದರೂ ಕೂಡ ಅವರ ಹಿಂದೆ ಈ ವ್ಯವಸ್ಥಿತವಾಗಿ ಸಂಚನ್ನು ಮಾಡುತ್ತಿರುವ ವ್ಯಕ್ತಿಗಳನ್ನು ಅರೆಸ್ಟ್ ಮಾಡಿಲ್ಲ. ಈ ಗಲಭೆ ಹಿಂದೆ ಕರೀಂ ಹೊಳಜೆಲ್ ಹೈದರ್ ಜಬ್ಬರ್ ಬಷೀರ್ ಎಂಬುವವರು ಸಕ್ರಿಯವಾಗಿ ಗಲಭೆಯ ಹಿಂದೆ ಇದ್ದಾರೆ. ಇವರ ಮೇಲೆ ಯಾವುದೇ ಕಾನೂನು ಕ್ರಮವನ್ನು ತೆಗೆದುಕೊಂಡಿಲ್ಲವೆನ್ನುವ ಆರೋಪವನ್ನು ಅಲ್ಲಿಯ ಜನರು ಮಾಡುತ್ತಿದ್ದಾರೆ. ಈ ಅಪರಾಧಿಗಳನ್ನು ಹಿಡಿದು ಹಲ್ಲೆ ನಡೆಸುವ ವ್ಯವಸ್ಥಿತ ಗಲಭೆ ಮಾಡುವವರ ಮೇಲೆ ಕಾನೂನುಕ್ರಮವನ್ನು ತೆಗೆದುಕೊಳ್ಳಬೇಕು. ಮತ್ತೆ ಈ ಸೂತ್ರಧಾರಿಗಳು ಇವರ ಹಿಂದೆ ಯಾರಿದ್ದಾರೆ, ಅವರನ್ನು ಬಂಧಿಸುವ ಕಾರ್ಯವನ್ನು ಮಾಡಬೇಕೆನ್ನುವ ವಿನಂತಿಯನ್ನು ಮಾಡುತ್ತೇನೆ. ವ್ಯವಸ್ಥಿತವಾಗಿ ಗಾಂಜಾ ಮಾದಕ ದ್ರವ್ಯಗಳನ್ನು ಮಾರಾಟ ಮಾಡುವ ಜಾಲ ಅಲ್ಲಿದೆ. ಅದನ್ನು ಅಲ್ಲಿ ನಿಲ್ಲಿಸಬೇಕು. ನನಗೆ ಅಲ್ಲಿ ಬೇಕಾಗಿರುವುದು ಶಾಶ್ವತವಾಗಿರುವ ಶಾಂತಿ ಪ್ರಕ್ರಿಯೆ ಅಲ್ಲಿ ನಡೆಯಬೇಕು. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅಪರಾಧಿಗಳು ಎಲ್ಲಿದ್ದರೂ ಕೂಡ ಅವರು ಯಾವುದೇ ಸ್ಥಾಮಾನದಲ್ಲಿದ್ದರೂ ಕೂಡ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವ ವಿನಂತಿಯನ್ನು ತಮ್ಮೂಲಕ ಮಾಡುವುದಕ್ಕೆ ಇಚ್ಛಿಸುತ್ತೇನೆ. ಈ ಬಗ್ಗೆ ಮಾನ್ಯ ಗೃಹಸಚಿವರು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಮತ್ತು ಸಂಬಂಧಪಟ್ಟ ಪೊಲೀಸ್ ಇಲಾಖೆ ನಿಷ್ಪಕ್ಷಪಾತದಿಂದ ಯಾವುದೇ ಮುಜುಗರವಿಲ್ಲದೆ ಕೆಲಸ ಮಾಡುವ ಒಂದು ನಿಟ್ಟಿನಲ್ಲಿ ಅವರಿಗೆ ಸ್ವಾತಂತ್ರ್ಯವನ್ನು ಕೊಡಬೇಕೆಂದು ಹೇಳುವ ವಿನಂತಿಯನ್ನು ತಮ್ಮೂಲಕ ಮಾಡುವುದಕ್ಕೆ ಇಚ್ಛಿಸುತ್ತೇನೆ. ಮಾನ್ಯ ಡಿ.ವಿ. ಸದಾನಂದಗೌಡರ ಪರವಾಗಿ ನಾನು ಇದನ್ನು ಉಲ್ಲೇಖ ಮಾಡುತ್ತಿದ್ದೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಒಂದೇ ಒಂದು ಬೇಡಿಕೆಯನ್ನು ಇಟ್ಟು ನನ್ನ ಮಾತುಗಳನ್ನು ಮುಕ್ತಾಯಗೊಳಿಸುತ್ತೇನೆ. ಸನ್ಮಾನ್ಯ ಆಹಾರ ಇಲಾಖೆಯ ಸಚಿವರೂ ಇಲ್ಲಿದ್ದಾರೆ. ಸನ್ಮಾನ್ಯ ಆಹಾರ ಸಚಿವರು ಇಲ್ಲಿದ್ದಾರೆ. 38 ಸಾವಿರ ಎಲ್‌ಪಿಜಿ ಗ್ಯಾಸ್ ಸೌಲಭ್ಯ ಇಲ್ಲದವರಿಗೆ ಚಿಮಣಿ ಎಣ್ಣೆ ಕಾರ್ಡ್‌ಗಳನ್ನು ಕೊಡುತ್ತಾರೆಂದು ಹೇಳಿ ಅವರಿಗೆ ಬೇಕಾದಂತಹ ಲಿಸ್ಟನ್ನು ಅಲ್ಲಿಂದ ಕಳುಹಿಸಲ್ಪಟ್ಟಿತ್ತು. ಆದರೆ ತಾವು ಕಳುಹಿಸಿಕೊಟ್ಟಿರುವುದು 28,500 ಮಾತ್ರ. 9,500 ಕಾರ್ಡ್‌ಗಳನ್ನು ಇನ್ನೂ ಕಳುಹಿಸಿಕೊಟ್ಟಿಲ್ಲ. ತಾವು ದಯವಿಟ್ಟು ಅದನ್ನು ಕಳುಹಿಸಿಕೊಡಬೇಕು. ವಿದ್ಯುತ್ ವೈಫಲ್ಯದಿಂದ ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆಯುತ್ತಿರುವವರಿಗೆ

ತೊಂದರೆ ಇದೆ. ಈ ನಿಟ್ಟಿನಲ್ಲಿ ಮಾನ್ಯ ಆಹಾರ ಸಚಿವರು ಹೇಳಿಕೆ ನೀಡಬೇಕು. ನನಗೆ ಇನ್ನು ಮುಂದೆ ಅವಕಾಶ ಸಿಗುತ್ತದೋ ಇಲ್ಲವೋ ಗೊತ್ತಿಲ್ಲ. ಕೊನೆಯ ಅವಕಾಶವಾಗಿ ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಮಾನ್ಯ ಗೃಹ ಸಚಿವರು): ಗ್ಯಾಸ್ ವಿಚಾರ, ರೇಷನ್ ವಿಚಾರ ಹೇಳಿದ್ದಾರೆ. ಅದನ್ನು ಆ ನಂತರ ಕೇಳಲಿ. ಫಿರಂಗಿ ಪೇಟೆ ಘಟನೆಯ ಬಗ್ಗೆ ನನ್ನ ಹತ್ತಿರ ಏನು ಮಾಹಿತಿ ಇದೆ ಕೊಡುತ್ತೇನೆ.

ಶ್ರೀ ಡಿ.ಬಿ. ಇನಾಂದಾರ್(ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು): ಈಗ ತಾನೇ ಮಾನ್ಯ ಸದಸ್ಯರಾದ ಶ್ರೀ ಯೋಗೀಶ್ ಭಟ್ ಅವರು ಒಂದು ಚೀಟಿಯನ್ನು ಕಳುಹಿಸಿದರು. ಅಲ್ಲೇನೋ ಕಡಿಮೆ ಇಬೆ ಎಂದು ಹೇಳಿದ್ದಾರೆ. ಜಿಲ್ಲಾಧಿಕಾರಿಗಳ ಜೊತೆಗೆ ವಿಚಾರಿಸಿ ಒಂದು ವೇಳೆ ಏನಾದರೂ ಕಡಿಮೆ ಆಗಿದ್ದರೆ ಅದನ್ನು ಭರ್ತಿ ಮಾಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿಧಾನಸಭಾ ಸದಸ್ಯರಾದ ಸದಾನಂದ ಗೌಡರು ಮತ್ತು ಯೋಗೀಶ್ ಭಟ್ ಅವರು ಬಂಟ್ವಾಳ ಪೊಲೀಸ್ ಠಾಣೆ ಸರಹದ್ದು ಫಿರಂಗಿ ಪೇಟೆ ಘಟನೆ ಬಗ್ಗೆ ಈಗಾಗಲೇ ಶೂನ್ಯ ವೇಳೆಯಲ್ಲಿ ತಮ್ಮ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಪ್ರಮುಖವಾಗಿ ದಿನಾಂಕ 11.03.2001ರಂದು ಬೆಳಗಿನ ಜಾವ ಸುಮಾರು 2.30 ಗಂಟೆ ಸಮಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪುದು ಗ್ರಾಮದ ಶ್ರೀ ದಾಮೋದರ ಕೊಠಾರಿ ಮತ್ತು ಅನಂದ ಬಂಗೇರಾ ಇವರುಗಳ ಮೇಲೆ ಕೆಲವು ದುಷ್ಕರ್ಮಿಗಳು ಹಲ್ಲೆ ನಡೆಸಿರುವುದರಿಂದ ಇಬ್ಬರಿಗೂ ತೀವ್ರವಾದಂತಹ ಗಾಯಗಳಾಗಿದ್ದು ಇವರುಗಳನ್ನು ತುರ್ತು ಚಿಕಿತ್ಸೆಗಾಗಿ ಮಂಗಳೂರಿನ ಫಾದರ್ ಮುಲ್ಲಾರ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಬಂಟ್ವಾಳ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ 49; 2001 ದಾಖಲಿಸಿದೆ. ಈ ಘಟನೆಯು ಬಂಟ್ವಾಳ ತಾಲ್ಲೂಕಿನ ಫಿರಂಗಿ ಪೇಟೆಯಲ್ಲಿ ಜರುಗಿರುತ್ತದೆ. ಶ್ರೀ ವಿಶ್ವನಾಥ್ ಪೈ ಮತ್ತು ಅವರ ನೌಕರ ಹೊಂಡಪ್ಪ ಇವರು ನೇಮೋತ್ಸವ ಹಬ್ಬದಿಂದ ಹಿಂದಿರುಗುತ್ತಿದ್ದಾಗ ಸುಮಾರು ಬೆಳಗಿನ ಜಾವ 3.30 ಗಂಟೆ ಸಮಯದಲ್ಲಿ ಕೆಲವು ದುಷ್ಕರ್ಮಿಗಳು ಫಿರಂಗಿ ಪೇಟೆಯಲ್ಲಿ, ಕತ್ತಿಯಿಂದ ಇಬ್ಬರ ಮೇಲೆ ಹಲ್ಲೆ ನಡೆಸಿ ತೀವ್ರವಾಗಿ ಗಾಯಗೊಳಿಸಿರುತ್ತಾರೆ. ತತ್ಸಂಬಂಧ ದಿನಾಂಕ 13.03.2001ರಿಂದ ಬೆಳಿಗ್ಗೆ 6.30 ಗಂಟೆಯಲ್ಲಿ ಬಂಟ್ವಾಳ ಪೋಲೀಸ್ ಠಾಣೆಯಲ್ಲಿ ಮೊಕದ್ದಮೆ ಸಂಖ್ಯೆ - 52:2001 ಪ್ರಕರಣ ದಾಖಲಿಸಲಾಗಿದೆ. ಗಾಯಾಳುಗಳನ್ನು ಚಿಕಿತ್ಸೆಗಾಗಿ ಶೀಘ್ರವೇ ಮಂಗಳೂರಿನ ವೆನ್‌ಲಾಕ್ ಸರ್ಕಾರಿ ಆಸ್ಪತ್ರೆಗೆ ಸಾಗಿಸಿ ನಂತರ ಮುಂದಿನ ಚಿಕಿತ್ಸೆಗೆ ಮಂಗಳೂರಿನ ನಗರದ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಘಟನೆ ನಡೆದ ಹಿನ್ನೆಲೆಯಲ್ಲಿ ಭಾರತೀಯ ದಂಡ ಪ್ರಕ್ರಿಯೆ ಸಂಹಿತೆ ಕಲಂ 144ರ ಪ್ರಕಾರ ಬಂಟ್ವಾಳ ಮತ್ತು ಪುತ್ತೂರ್ ತಾಲ್ಲೂಕುಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಪ್ರತಿಬಂಧಕ ಆಜ್ಞೆಯನ್ನು ಜಾರಿಗೊಳಿಸಲಾಗಿದೆ. ಮೊಕದ್ದಮೆ ಸಂಖ್ಯೆ- 52:2001ರಲ್ಲಿ ಮೂವರೂ ಆಪಾದಿತ ವ್ಯಕ್ತಿಗಳನ್ನು ಮೂರು ಕಡೆಗಳ ಸಹಿತ ಇರಿದ ಸ್ಥಳಗಳಲ್ಲಿ ದಿನಾಂಕ 11.3.2001 ರಂದು ದಸ್ತಗಿರಿ ಮಾಡಲಾಗಿದೆ. ಇವರೆಲ್ಲರೂ ಈ ಎರಡೂ ಪ್ರಕರಣಗಳಲ್ಲಿ ಅಂದರೆ ಮೊಕದ್ದಮೆ ಸಂಖ್ಯೆ-49: 2001, ಮತ್ತು 52:2001 ರಲ್ಲಿ ಅಪರಾಧಗಳನ್ನು ಎಸಗಿರುವುದಾಗಿ ಆರೋಪಿಗಳು ಒಪ್ಪಿಕೊಂಡಿದ್ದಾರೆ. ಅಪರಾಧ ಸಂಖ್ಯೆ-49:2001ರಲ್ಲಿ ಅಪರಾಧಿಯ ಅವಸ್ಥೆಯಲ್ಲಿ ಕೇವಲ ಮಾತಿನ ಚಕಮಕಿಯಲ್ಲಿ ಗಾಯಾಳುಗಳ

ಮೇಲೆ ಹಲ್ಲೆ ನಡೆಸಲಾಗಿದೆ ಹಾಗೂ ಮೊಕದ್ದಮೆ ಸಂಖ್ಯೆ-52:2001ರಲ್ಲಿ ಆಪಾದಿಸಿದಲ್ಲಿ ಹಿಂದಿನ ದಿನ ವಿಶ್ವನಾಥ್ ಪೈ ಅವರ ಮನೆಯಲ್ಲಿ ಎಲೆಕ್ಟ್ರಿಕಲ್ ಕೆಲಸ ಮಾಡಿ ಆದಕ್ಕೆ ಕೊಡಬೇಕಾದ ಹಣವನ್ನು ನಿರಾಕರಿಸಿದ್ದರಿಂದ ಅವನ ಮೇಲೆ ದಿನಾಂಕ 13.3.2001ರಂದು ಹಲ್ಲೆ ನಡೆಸಲಾಗಿತ್ತೆಂದು ವರದಿಯಾಗಿದೆ. ಮೇಲಿನ ಎರಡೂ ಪ್ರಕರಣಗಳಲ್ಲಿ ಎಲ್ಲಾ ಆಪಾದಿತರುಗಳನ್ನು ಅಂದರೆ ಮೂರು ಜನರನ್ನು ದಸ್ತಗಿರಿ ಮಾಡಿ ದಿನಾಂಕ 29.3.2001ರವರೆಗೆ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದ್ದು ಇದನ್ನು ದಿನಾಂಕ 14.4.2001ರ ವರೆಗೂ ಮುಂದುವರಿಸಲಾಗಿದೆ. ಘಟನೆ ನಡೆದ ಪ್ರದೇಶದಲ್ಲಿ ಪರಿಸ್ಥಿತಿ ಶಾಂತವಾಗಿದ್ದು, ಆದರೂ ಸಹ ಮುಂಜಾಗ್ರತಾ ಕ್ರಮವಾಗಿ ಬಂದೋಬಸ್ತನ್ನು ಏರ್ಪಡಿಸಲಾಗಿದೆ. ಈಗಾಗಲೇ ನಮ್ಮ ಯೋಗೀಶ್ ಭಟ್ ಅವರು ಹೇಳಿದರು. ಕೆಲವು ರಾಜಕೀಯ ಶಕ್ತಿಗಳು ಮತ್ತು ಮಂತ್ರಿ ಎಂದು ಹೇಳಿದರು, ಹೆಸರು ಹೇಳಲಿಲ್ಲ. ಮಂತ್ರಿಗಳ ಪ್ರಭಾವದಿಂದ ಅದು ಕೇಸ್ ಮೇಲೆ ಪರಿಣಾಮ ಬೀಳುವ ಸಾಧ್ಯತೆ ಇದೆ ಎನ್ನತಕ್ಕದ್ದನ್ನು ಹೇಳಿದ್ದಾರೆ. ಅದು ಸಾಧ್ಯವಿಲ್ಲ. ಯಾವ ಮಂತ್ರಿಯ ಪ್ರಭಾವಕ್ಕೂ ಒಳಗಾಗುವುದಿಲ್ಲ. ನಿಮ್ಮ ಪ್ರಭಾವಕ್ಕೂ ಒಳಗಾಗುವುದಿಲ್ಲ. ಕಾನೂನಿನ ಪ್ರಕಾರ ಏನು ಕ್ರಮ ಜರುಗಿಸಬೇಕೋ ಅದನ್ನು ಜರುಗಿಸುತ್ತೇವೆ. ಅದರ ಪ್ರಕಾರ ಈಗಾಗಲೇ ಮೂವರನ್ನು ಅರೆಸ್ಟ್ ಮಾಡಿದ್ದೇವೆ. ಕೇಸ್ ರಿಜಿಸ್ಟರ್ ಮಾಡಿದ್ದೇವೆ. ಅದಕ್ಕಾಗಿ ನಾನು ಬಹುಶಃ ಅವರು ಧನ್ಯವಾದಗಳನ್ನು ಹೇಳಿತ್ತಾರೆಂದು ತಿಳಿದುಕೊಂಡಿದ್ದೆ. ಅದನ್ನು ಬಿಟ್ಟು ಮಿನಿಸ್ಟರ್ ಪ್ರಭಾವದಿಂದ ಆ ಕೇಸನ್ನು ಹಾಳು ಮಾಡಬೇಕೆಂದು ಮಾಡಿದ್ದಾರೆ. ಹಾಗೆ ಮಾಡಿದ್ದಾರೆ ಎನ್ನತಕ್ಕ ಮಾತು ಬಂತು. ದಯವಿಟ್ಟು ಹಾಗೆ ತಿಳಿದುಕೊಳ್ಳುವುದಕ್ಕೆ ಹೋಗಬೇಡಿ. ಕಾನೂನಿನ ಉಲ್ಲಂಘನೆ ಯಾರೇ ಮಾಡಿದರೂ ಕೂಡ ಅವರಿಗೆ ಶಿಕ್ಷೆ ಕೊಡತಕ್ಕದ್ದು ಈ ಸರ್ಕಾರ. ಅದಕ್ಕಾಗಿ ತಾವು ದಯವಿಟ್ಟು ಊಹಾಪೋಹದ ಮೇಲೆ ಕೆಲಸ ಮಾಡುವುದಕ್ಕೆ ಹೋಗಬೇಡಿ. ಅಥವಾ ಯಾರಾದರೂ ಒಬ್ಬರು ಒಂದು ಸೆಕ್ಷನ್‌ಗೆ ಸಂಬಂಧಪಟ್ಟ ಹಾಗೆ ಕ್ರಿಮಿನಲ್ಸ್ ಅಥವಾ ಕ್ರಿಮಿನಲ್ ಆಕ್ಟಿವಿಟೀಸ್ ಇದ್ದ ತಕ್ಷಣವೇ ನ್ಯಾಯ ಸಿಗುವುದಿಲ್ಲ ಎನ್ನತಕ್ಕ ವಿಚಾರ ಏನು ನಿಮ್ಮ ಮನಸ್ಸಿನಲ್ಲಿ ಅಳುಕು ಇದೆ, ದಯವಿಟ್ಟು ಅದನ್ನು ತೆಗೆದುಹಾಕಿ. ಸ್ವಲ್ಪ ಲಾರ್ಜ್ ಹಾರ್ಟೆಡ್ ಆಗಿ ನೀವು ನೋಡಿ. ದೇಶದಲ್ಲಿ ಪರ್ಟಿಕ್ಯುಲರಿ ಮಂಗಳೂರಿನಲ್ಲಿ ಎಷ್ಟು ಶಾಂತಿ ಸುವ್ಯವಸ್ಥೆ ಇರುತ್ತದೆ ಎನ್ನತಕ್ಕದ್ದು ನಾನು ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ. ಅದಕ್ಕಾಗಿ ಅವರ ಕಡೆ ಜಾಸ್ತಿ ಆಗಬೇಕು. ಮಾನ್ಯ ಯೋಗೀಶ್ ಭಟ್ ಅವರು ಹೇಳಿದ್ದು ನಡೆಯುತ್ತಿದೆ ಸ್ವಲ್ಪ. ಅದಕ್ಕಾಗಿ ಅವರಿಗೆ ಹೇಳುತ್ತಿದ್ದೇನೆ. ಅದನ್ನು ಸ್ವಲ್ಪ ಗಂಭೀರವಾಗಿ ಅವರ ಜನರನ್ನೂ ಕೂಡ ಹತೋಟಿಯಲ್ಲಿ ಇಟ್ಟುಕೊಂಡು ಇಂತಹ ಪ್ರಕ್ಷುಬ್ಧ ವಾತಾವರಣದಲ್ಲಿ ಯಾವ ರೀತಿ ನಡೆದುಕೊಳ್ಳಬೇಕು ಎನ್ನತಕ್ಕ ಟ್ರೈನಿಂಗ್ ಕೊಟ್ಟರೆ ಖಂಡಿತವಾಗಿಯೂ ಇಂತಹ ಯಾವುದೇ ಘಟನೆ ಮುಂದೆ ಆಗುವುದಿಲ್ಲ. ಮತ್ತು ಯಾವ ಮಂತ್ರಿಯ ಪ್ರಭಾವಕ್ಕೂ ನಾವು ಒಳಗಾಗಿ ಕೆಲಸ ಮಾಡುವುದಿಲ್ಲ- ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್: ಮಾನ್ಯ ಅಧ್ಯಕ್ಷರೆ, ನಿನ್ನೆ ಅಲ್ಲ ಮೊನ್ನೆ ಗಲಭೆ ವಾಪಸ್ ಉತ್ಪನ್ನ ಆಗಿದೆ. ನಿನ್ನೆ ಅಲ್ಲ ಮೊನ್ನೆ ವಾಪಸ್ ಹಲ್ಲೆ ಆಗಿದೆ. ಈ ಮಾಹಿತಿ ಕೂಡ ನನ್ನ ಗಮನಕ್ಕೆ ಬಂದಿದೆ. ಗಲಭೆ ನಿಂತಿಲ್ಲ. ದಯವಿಟ್ಟು ಅದರ ಬಗ್ಗೆ ಹೆಚ್ಚಿನ ಪ್ರಕ್ರಿಯೆ ತೆಗೆದುಕೊಳ್ಳಬೇಕು ಮತ್ತು ಇದರ ಹಿಂದಿರುವಂತಹ ವ್ಯಕ್ತಿಗಳು ಯಾರು ಇದ್ದಾರೆ ಆಪಾದಿತರನ್ನು ನಾನು ಹೇಳುತ್ತಿಲ್ಲ. ಹಿಂದೆ ನಡೆಸುವಂತಹ ವ್ಯಕ್ತಿಗಳ ಮೇಲೆ ನೀವು ಎಲ್ಲಿಯವರೆಗೆ ಕ್ರಮ ತೆಗೆದುಕೊಳ್ಳುವುದಿಲ್ಲ,

ಈ ಆಪಾದಿತರು ಅಲ್ಲದಿದ್ದರೆ ಇನ್ನೊಬ್ಬರನ್ನು ಎತ್ತಂಗಡಿ ಮಾಡುವಂತಹ ಸಾಧ್ಯತೆ ಇರುವುದರಿಂದ ತಾವು ದಯವಿಟ್ಟು ಅಂಥವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಮತ್ತು ಯಾರು ಗಾಯಾಳುಗಳು ಇದ್ದಾರೆ, ಸನ್ಮಾನ್ಯ ಸಚಿವರೇ ಅವರಿಗೆ ಪರಿಹಾರವನ್ನು ಕೊಡುವಂತಹದನ್ನು ಮಾಡಬೇಕು. ಪರಿಹಾರ ಘೋಷಣೆ ಮಾಡಬೇಕು ಎನ್ನತಕ್ಕ ವಿನಂತಿಯನ್ನು ಕೂಡ ಮಾಡುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇಂತಹ ಕೇಸಸ್‌ನಲ್ಲಿ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲ. ತಮಗೆ ಗೊತ್ತಿದೆ. ಯಾವ ಕೇಸಸ್‌ನಲ್ಲಿ ಕ್ರಿಮಿನಲ್ ಕ್ಲಾಸಸ್ ಅಥವಾ ಯಾವುದಾದರೂ ಒಂದು ಘಟನೆ ಹಿನ್ನೆಲೆ ಏನು ಇದೆ ಎನ್ನತಕ್ಕದ್ದನ್ನು ಹೇಳುವುದಕ್ಕೆ ಆಗುವುದಿಲ್ಲ. ಬೇಕಾಗಿ ಒಬ್ಬರು ಅಕ್ಯೂಸ್ಡ್ ಮುಸ್ಲಿಮ್ ಅಥವಾ ವಿಕ್ಟಿಮ್ ಹಿಂದೂ ಆದ ತಕ್ಷಣವೇ ನಾವು ಪರಿಹಾರ ಕೊಡಬೇಕು ಎನ್ನುವುದು ಬರುವುದಿಲ್ಲ. ಈಗಾಗಲೇ ಎನ್‌ಕ್ವೈರಿ ನಡೆದಿದೆ. ಎನ್‌ಕ್ವೈರಿ ಪ್ರಕಾರ ಏನು ಕ್ರಮವನ್ನು ಜರುಗಿಸಬೇಕೋ ಆ ಕ್ರಮವನ್ನು ಜರುಗಿಸುತ್ತೇವೆ. ಮತ್ತು ಗಾಯಾಳುಗಳಿಗೆ ಸರ್ಕಾರದವತಿಯಿಂದ ಏನಾದರೂ ಔಷಧೋಪಚಾರ ಆಗಬೇಕಾಗಿದ್ದರೆ ನಾನು ಸಂಬಂಧಪಟ್ಟಂತಹ ಮಂತ್ರಿಗಳಿಗೆ ಹೇಳುತ್ತೇನೆ. ಅಲ್ಲಿ ಸರ್ಕಾರಿ ಆಸ್ಪತ್ರೆಯಲ್ಲಿ ವ್ಯವಸ್ಥೆ ಮಾಡತಕ್ಕದ್ದು ಅದು ಸಹನೀಯ.

ಶ್ರೀ ಎನ್. ಯೋಗೀಶ್ ಭಟ್: ಲಕ್ಷಗಟ್ಟಲೆ ಬಿಲ್ ಆಗಿದೆ. ಅದಕ್ಕೆ ಪರಿಹಾರವನ್ನು ಜಿಲ್ಲಾಧಿಕಾರಿಗಳಿಂದ ಪರಿಹಾರವನ್ನು ಕೊಡಿಸುವಂತಹ ವ್ಯವಸ್ಥೆ ಆದರೂ ದಯವಿಟ್ಟು ಮಾಡಿ. ಬೇರೆ ಕಡೆಯಲ್ಲಿ ಇಂತಹ ಗಲಾಟೆ ಸಂದರ್ಭದಲ್ಲಿ ಪರಿಹಾರ ಕೊಟ್ಟಿದ್ದು ಇದೆ. ಆದರೆ ತಾವು ಇಲ್ಲಿ ಏಕೆ ಪರಿಹಾರ ಕೊಡುತ್ತಿಲ್ಲ ಎಂದು ಹೇಳುವಂತಹದು ನನ್ನ ಕಳಕಳಿ. ತಾವು ದಯವಿಟ್ಟು ಆದೇಶ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆದೇಶವನ್ನು ಯಾರಿಗೆ ಕೊಡಲಿ ನಿಮಗೇ ಗೊತ್ತಿದೆ. ಇದು ವೈಯಕ್ತಿಕವಾಗಿ ನಡೆದಿರತಕ್ಕದ್ದು. ಯಾವುದೋ ಒಂದು ಕಾರಣಕ್ಕಾಗಿ ಜಗಳಗಳು ನಡೆಯುತ್ತವೆ. ಈಗ ಅದರಲ್ಲಿ ಹೇಳಿದ ಹಾಗೆ ಎಲೆಕ್ಟ್ರಿಕಲ್ ಬಿಲ್ ಕೊಡಲಿಲ್ಲ ಎಂದು ಹೇಳಿ ಇವರಿಗೂ ಇವರಿಗೂ ಮಾತಿನ ಚಕಮಕಿ ನಡೆಯಿತು, ಹೊಡೆದಾಟ ಆಯಿತು. ಅದಕ್ಕೆ ಪರಿಹಾರ ಕೊಡಿ ಎಂದರೆ ಹೇಗೆ?

ಶ್ರೀ ಎನ್. ಯೋಗೀಶ್ ಭಟ್: ಇದು ವೈಯಕ್ತಿಕ ಜಗಳ ಅಲ್ಲ. ಇಲ್ಲಿ ದುರುದ್ದೇಶ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಪೊಲೀಸ್ ಎನ್‌ಕ್ವೈರಿ ವಿಚಾರ ಬರುತ್ತದಲ್ಲಾ ಏನು ದುರುದ್ದೇಶ ಇದೆ ನೋಡೋಣ. ಪೊಲೀಸ್ ಎನ್‌ಕ್ವೈರಿಯಲ್ಲಿ ಛಾರ್ಜ್ ಶೀಟ್ ಹಾಕಿದ್ದಾರೆ. ಅರೆಸ್ಟ್ ಮಾಡಿದ್ದಾರೆ. ಮೂವರು ಜ್ಯುಡಿಷಿಯಲ್ ಕಸ್ಟಡಿಯಲ್ಲಿ ಇದ್ದಾರೆ. ನೋಡೋಣ.

6.10 ಪಿ.ಎಂ

ವಿಷಯ: (vii) ಆಲಮಟ್ಟಿ ಅಣೆಕಟ್ಟಿನ ಮುಳುಗಡೆಯಾಗಿರುವ ರೈತರ ಜಮೀನಿಗೆ ಪರಿಹಾರ ಹಣದ ಬಿಡುಗಡೆ

+ ಶ್ರೀ ಪಿ.ಹೆಚ್. ಪೂಜಾರ್(ಬಾಗಲಕೋಟೆ): ಮಾನ್ಯ ಛೇರ್ಮನ್‌ರೆ, ಆಲಮಟ್ಟಿ ಅಣೆಕಟ್ಟಿನ ವಿಚಾರದಲ್ಲಿ ಸರ್ಕಾರ ಒಂದು ವಿಷಯವನ್ನು [illegible] ಪಾಲಿಸ